**ಪಿಡಬ್ಲೂಃ 1** **ಸಿ.ಎಂ.ಸಿ ನಂ. 237/2019**

ದಿನಾಂಕ **06-08-2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ ಶ್ರೀ. ಎಸ್. ಹೆಚ್.ಆರ್ ಎದುರುದಾರರ ಪರ ವಕೀಲರಿಂದಃ-**

1. ನಾನು ಈ ಅರ್ಜಿಯನ್ನು ನನ್ನ ಯಜಮಾನ ರ ವಿರುದ್ದ ಹಾಕಿದ್ದೇನೆ. ನನ್ನ ಯಜಮಾನ ಎಂ.ವಿ.ಜೆ ಮೇಡಿಕಲ್ ಕಾಲೇಜಿನಲ್ಲಿ ಕೆಲಸ ಮಾಡುತ್ತಾರೆ. ಅವರು ಏನು ಕೆಲಸ ಮಾಡುತ್ತಾರೆ ಎಂದರೆ ಅಲ್ಲಿ ಕೆಲಸ ಮಾಡುತ್ತಾರೆ ಏನು ಕೆಲಸ ಎಂದು ನನಗೆ ಗೊತ್ತಿಲ್ಲ.

2. ದಿಃ 28-05-2009 ರಲ್ಲಿ ನನ್ನ ಗಂಡ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು. ಈಗ ಎದುರುದಾರರು ಅಲ್ಲಿ ಕೆಲಸ ಮಾಡುವುದು ನನಗೆ ಗೊತ್ತಾ ಎಂದರೆ ಇಲ್ಲ ಆವಾಗ ಮಾಡುತ್ತಿದ್ದರು ಈಗ ಮಾಡುತ್ತಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನನಗೆ ಖುದ್ದಾಗಿ ಏನಾದರೂ ಮಾಹಿತಿ ಇದೆಯಾ ಎದುರುದಾರರು ಅಲ್ಲಿ ಕೆಲಸ ಮಾಡುವ ಬಗ್ಗೆ ಎಂದರೆ ಇಲ್ಲ ಮಾಹಿತಿ ಇಲ್ಲ.

3. ಎದುರುದಾರರು ಆ ಕೆಲಸ 2010 ರಲ್ಲೇ ಬಿಟ್ಟಿದ್ದಾರೆ ಎಂದು ತಮ್ಮ ತಕರಾರಿನಲ್ಲಿ ತಿಳಿಸಿರುತ್ತಾರೆ ಎಂದರೆ ಇಲ್ಲ ಅವರು ಅಲ್ಲೆ ಕೆಲಸ ಮಾಡುತ್ತಾರೆ. ನನಗೆ ಎದುರುದಾರರು ಅಲ್ಲಿ ಕೆಲಸ ಮಾಡುತ್ತಿದ್ದಾರೆಂದು ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಲು ಏನಾದರೂ ತೊಂದರೆ ಇದೆಯಾ ಎಂದರೆ ತೊಂದರೆ ಇದೆ.

4. ಎದುದಾರರು ಅಲ್ಲಿ ಕೆಲಸ ಮಾಡುತ್ತಿಲ್ಲ. ಅವರ ಹತ್ತಿರ ಹೆಚ್ಚು ಜೀವನಾಂಶ ಪಡೆಯಲು ಸುಳ್ಳು ಹೇಳುತಿದ್ದೀರಾ ಎಂದರೆ ನಮಗೆ ಜೀವನ ಮಾಡಲು ಕಷ್ಟವಾಗುತ್ತಿದೆ.

5. ನನ್ನ ಮಗಳ ಹೆಸರು ಪುಷ್ಪ. ನನ್ನ ಮಗಳಿಗೆ ಮದುವೆ ಆಗಿದೆಯಾ ಎಂದರೆ ಇಲ್ಲ ಓದುತ್ತಿದ್ದಾಳೆ. ನನ್ನ ಮಗಳಿಗೆ ಮದುವೆ ಆದರೂ ಕೂಡ ನಾನು ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

6. ನಾನು ಕೂಲಿ ಕೆಲಸ ಮಾಡುತ್ತೇನೆ. ಸದರಿ ಕೆಲಸದಲ್ಲಿ ನನಗೆ ದಿನಕ್ಕೆ 300 ರೂ ಬರುತ್ತದೆ. ಎದುರುದಾರರು ನಾನು ಕೂಲಿ ಕೆಲಸ ಮಾಡಲ್ಲ, ಟೈಲರ್ ಕೆಲಸ ಮಾಡುತ್ತೇನೆಂದು ತಮ್ಮ ಅರ್ಜಿಯಲ್ಲಿ ಹೇಳಿದ್ದಾರೆ ಎಂದರೆ ಇಲ್ಲ. ಅದು ಸುಳ್ಳು. ನಾನು ಟೈಲರಿಂಗ್ ಕೆಲಸ ಮಾಡಿಕೊಂಡು ಸಂಪಾದನೆ ಮಾಡುತ್ತಿದ್ದೇನೆಂದರೆ ಸರಿಯಲ್ಲ.

7. ನಾನೀಗ ನನ್ನ ಅರ್ಜಿಯಲ್ಲಿ ತಿಳಿಸಿರುವ ವಿಳಾಸದಲ್ಲಿ ಯಾರ ಮನೆಯಲ್ಲಿದ್ದೇವೆ ಎಂದರೆ ನನ್ನ ತಾಯಿಯ ಮನೆಯಲ್ಲಿ ಇದ್ದೇನೆ. ಅದು ನನ್ನ ತಾಯಿಯ ಸ್ವಂತ ಮನೆ. ಆದ್ದರಿಂದ ಬಾಡಿಗೆ ಖರ್ಚು ಏನೂ ಬರುವುದಿಲ್ಲ ಎಂದರೆ ನಾನು ನಮ್ಮ ಅಮ್ಮ ಬುದುಕಿರುವರೆಗೂ ಅಲ್ಲಿ ಇರಬಹುದು. ನಂತರ ನಮ್ಮ ಅಣ್ಣ ಬಂದರೆ ನಾನು ಬಿಡಬೇಕಾಗಿರುತ್ತದೆ. ನಾನು, ನನ್ನ ಅಮ್ಮ ಮತ್ತು ಅಣ್ಣ ಒಟ್ಟಿಗೆ ಇದ್ದೇವೆ ಎಂದರೆ ಸರಿಯಲ್ಲ.

8. ಎದುರುದಾರರ ತಾಯಿಗೆ ವಯಸ್ಸಾಗಿದೆ ಎಂದರೆ ನನಗೆ ಗೊತ್ತಿಲ್ಲ. ಎದುರುದಾರರ ತಾಯಿ ಬದುಕಿದ್ದಾರಾ ಎಂದರೆ ಹೌದು. ಅವರಿಗೆ ವಯಸ್ಸಾಗಿದೆ ಎಂದರೆ ಸರಿ. ಅವರನ್ನು ನೋಡಿಕೊಳ್ಳಲು ಎದುರುದಾರ ಒಬ್ಬನೇ ಮಗ ಎಂದರೆ ತಂಗಿಯೂ ಇದ್ದಾರೆ ಅವರ ಜೊತೆಯೂ ಇರುತ್ತಾರೆ. ಎದುರುದಾರರ ತಂಗಿಗೆ ಮದುವೆಯಾಗಿದೆ ಅವರು ನೋಡಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರ ತಂಗಿಯೇ ನೋಡಿಕೊಳ್ಳುತ್ತಿರುವುದು ಎನ್ನುತ್ತಾರೆ.

9. ಎದುರುದಾರರಿಗೆ ಕೂಲಿ ಕೆಲಸ ಬಿಟ್ಟರೆ ಬೇರೆ ಯಾವುದೇ ಕೆಲಸ ಇಲ್ಲ ಎಂದರೆ ಸರಿಯಲ್ಲ. ಎದುರುದಾರನ ತಾಯಿಗೆ ಅನಾರೋಗ್ಯ ಇದ್ದಾಗ ಎದುರುದಾರರೆ ಆಸ್ಪತ್ರೆಗೆ ಖರ್ಚು ಮಾಡಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಅವರು ಚೆನ್ನಾಗಿ ಇದ್ದಾರೆ.

10. ಅರ್ಜಿಯನ್ನು ಹಾಕಲು ಮಾಹಿತಿ ಯಾರು ನೀಡಿದ್ದಾರೆ ಎಂದರೆ ನಾನೇ ನೀಡಿರುತ್ತೇನೆ. ಎದುರುದಾರನಿಗೆ ಜಮೀನು ಇದೆಯಾ ಎಂದರೆ ಹೌದು. ಸದರಿ ವಿಷಯವಾಗಿ ನಾನು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದಿರಾ ಎಂದರೆ ಇಲ್ಲ. ಎದುರುದಾರರ ಹೆಸರಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರದಾರನ ಆಸ್ತಿಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ.

11. ಈಗ ಹೆಚ್ಚಿನ ಜೀವನಾಂಶವನ್ನು ಪಡೆಯಲು ಯಾವ ಕಾರಣಕ್ಕಾಗಿ ಅರ್ಜಿಯನ್ನು ಹೂಡಿದ್ದಿರಾ ಎಂದರೆ ನನ್ನ ಮಗಳಿಗೆ ಓದಿಸಲು ಕಷ್ಟವಾಗುತ್ತಿದೆ. ಆಸ್ಪತ್ರೆಯ ಖರ್ಚು ಮತ್ತು ಜೀವನ ಮಾಡುವುದಕ್ಕೆ ಕಷ್ಟ ಆಗಿರುವುದರಿಂದ ಬೇಕಾಗಿರುತ್ತದೆ. ನಾನು ಆರೋಗ್ಯವಾಗಿದ್ದೇನೆ, ನನಗೆ ಏನೂ ಖಾಯಿಲೆ ಇಲ್ಲ ಎಂದರೆ ಸರಿಯಲ್ಲ. ಸದರಿ ವಿಷಯವಾಗಿ ನಾನು ಯಾವುದಾದರೂ ದಾಖಲಾತಿಯನ್ನು ಕೊಟ್ಟಿದ್ದಿರಾ ಎಂದರೆ ಇಲ್ಲ. ನನ್ನ ಮಗಳಿಗೆ ಓದಿಸಲು ಕಷ್ಟವಾಗುತ್ತಿದೆ. ಆಸ್ಪತ್ರೆಯ ಖರ್ಚು ಮತ್ತು ಜೀವನ ಮಾಡುವುದಕ್ಕೆ ಕಷ್ಟ ಆಗಿರುವುದರಿಂದ ಬೇಕಾಗಿರುತ್ತದೆ ಎಂದು ನಾನು ಅರ್ಜಿಯಲ್ಲಿ ತಿಳಿಸಿದ್ದೇನಾ ಎಂದರೆ ಹೌದು. ನನ್ನ ಅರ್ಜಿಯಲ್ಲಿ ಅನಾರೋಗ್ಯದ ಬಗ್ಗೆ ಆಗಲಿ, ಮಗಳ ಓದಿನ ಬಗ್ಗೆಯಾಗಲಿ ಹೇಳಿಲ್ಲ, ಹೆಚ್ಚಿನ ಜೀವನಾಂಶಕೋಸ್ಕರ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

12. ನನಗೆ ನನ್ನ ತವರು ಮನೆಯವರು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ ಆದ್ದರಿಂದ ನನಗೆ ಹೆಚ್ಚಿನ ಜೀವನಾಂಶ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>**–

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.